**ಓ.ಎಸ್.:26/18**

**ಡಿ. ಡಬ್ಲ್ಯೂ:1**

ದಿನಾಂಕಃ 18-08-2018 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**<u>ಪಾಟೀ ಸವಾಲುಃ ವಾದಿ ಪರ ವಕೀಲರಾದ</u>** <u>ಶ್ರೀ ಸಿ.ಎ.ಟಿ. ರವರಿಂದ</u>

ಈ ದಾವೆಯನ್ನು ಯಾರು ಯಾರ ವಿರುದ್ಧ ಹಾಕಿರುತ್ತಾರೆಂದು ನನಗೆ ಗೊತ್ತಿಲ್ಲ. ಈ ದಾವೆಯನ್ನು ಒಂದು ಜಮೀನಿನ ಮೇಲೆ ಹಾಕಿರುತ್ತಾರೆ . ಈ ದಾವೆಯಲ್ಲಿ ವಾದಿಗಳು ಏನು ದಾಖಲೆಗಳನ್ನು ಹಾಜರು ಪಡಿಸಿರುತ್ತಾರೆಂದು ನಾನು ಕೇಳಿ ತಿಳಿದುಕೊಂಡಿರುತ್ತೇನೆ. ನಮ್ಮ ಮನೆತನದ ಮೂಲ ಪುರುಷ ಭೀಮಪ್ಪ ಅಂದರೆ ಸರಿ. ಭೀಮಪ್ಪನಿಗೆ ಸಿದ್ದಪ್ಪ ಮತ್ತು ಭೀಮಶೆಪ್ಪ ಎಂಬ ಇಬ್ಬರು ಮಕ್ಕಳು ಅಂದರೆ ಸರಿ. ಮೂಲ ಪುರುಷ ಭೀಮಪ್ಪನ ಮಗ ಭೀಮಶೆಪ್ಪ ನನ್ನ ಮದುವೆಯ ನಂತರ ಮರಣ ಹೊಂದಿರುತ್ತಾನೆ. ಮೂಲ ಪುರುಷ ಭೀಮಪ್ಪನ ಮಗ ಭೀಮಶೆಪ್ಪನ ಮದುವೆ ಆಗಿತ್ತೋ ಇಲ್ಲವೋ ಅಂದರೆ ಸಾಕ್ಷಿಯು ಮದುವೆಯಾಗಿತ್ತು ಎನ್ನುತ್ತಾರೆ. ಮೂಲ ಪುರುಷ ಭೀಮಪ್ಪನ ಮಗ ಭೀಮಶೆಪ್ಪ ಮತ್ತು ಆತನ ಹೆಂಡತಿ ಲಗಮವ್ವ ಇಬ್ಬರು ಸಂತತಿ ಇಲ್ಲದೇ ಮರಣ ಹೊಂದಿರುತ್ತಾರೆ ಅಂದರೆ ಸರಿ. ನನ್ನ ಗಂಡನ ಅಜ್ಜನಿಗೆ ಭೀಮಪ್ಪ ಮತ್ತು ಯಲ್ಲಪ್ಪ ಇಬ್ಬರು ಮಕ್ಕಳು ಅಂದರೆ ಸರಿ. ಭೀಮಪ್ಪ ನನ್ನ ಮಾವ ಇರುತ್ತಾನೆ ಅಂದರೆ ಸರಿ. ನನ್ನ ಗಂಡ ಮರಣ ಹೊಂದಿರುತ್ತಾನೆ ಮತ್ತು ನನಗೆ ಮಕ್ಕಳು ಇಲ್ಲ ಅಂದರೆ ಸರಿ. ಮಲ್ಲವ್ವ ನನ್ನ ಮಾವನ ತಂಗಿ ಅಂದರೆ ಸರಿ . 1 ನೇ ವಾದಿ 1 ಪ್ರತಿವಾದಿಯ ಹೆಂಡತಿ ಅಂದರೆ ಸರಿ. ವಾದಿ 2 ಮತ್ತು 3 ರವರು 1 ನೇ ವಾದಿ ಮತ್ತು 1 ನೇ ಪ್ರತಿವಾದಿಯ ಮಕ್ಕಳು ಅಂದರೆ ಸರಿ. 1 ನೇ ಪ್ರತಿವಾದಿಗೆ ವಾದಿಗಳನ್ನು ಬಿಟ್ಟು ಬೇರೆ ಹೆಂಡತಿ ಮಕ್ಕಳು ಇರುವುದಿಲ್ಲ ಅಂದರೆ ಸರಿ. ಮೂಲ ಪುರುಷ ಭೀಮಪ್ಪನ ಮರಣದ ನಂತರ ಆತನ ಮಕ್ಕಳಾದ ಸಿದ್ದಪ್ಪ ಮತ್ತು ಭೀಮಶೆಪ್ಪರವರಿಗೆ ಸರ್ವೆ ನಂ. 224, 242/1 ಬಂದಿರುತ್ತವೆ ಅಂದರೆ ಸರಿ. ಸರ್ವೆ ನಂ. 224 ರಲ್ಲಿ ಅರ್ಧ ಭಾಗವನ್ನು ಭೀಮಪ್ಪನ ಮಗ ಭೀಮಶೆಪ್ಪ 1 ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತಾನೆ ಅಂದರೆ ಸಾಕ್ಷಿಯು ಹಿರಿಯರು ಇದ್ದಾಗ ಮಾರಾಟ ಮಾಡಿರುತ್ತಾನೆ ಎನ್ನುತ್ತಾರೆ. ಹಿರಿಯರು ಅಂದರೆ ಯಾರು ಅಂದರೆ ಸಾಕ್ಷಿಯು ನನ್ನ ಮಾವ ಅಂದರೆ ನನ್ನ ಗಂಡನ ತಂದೆ ಭೀಮಪ್ಪ ಇದ್ದಾಗ ಸರ್ವೆ ನಂ. 224 ರ ಅರ್ಧ ಭಾಗ ಜಮೀನು ಭೀಮಪ್ಪನ ಮಗ ಭೀಮಶೆಪ್ಪ ಮಾರಾಟ ಮಾಡಿರುತ್ತಾನೆ ಎನ್ನುತ್ತಾರೆ. ಭೀಮಶೆಪ್ಪ ಸರ್ವೆ ನಂ. 224 ರಲ್ಲಿ ತನ್ನ ಅರ್ಧ ಭಾಗ ಜಮೀನನ್ನು ಮಾರಾಟ ಮಾಡುವಾಗ ನಾನು, ನನ್ನ ಗಂಡ, 1 ನೇ ಪ್ರತಿವಾದಿ ಮತ್ತು ಭೀಮಶೆಪ್ಪ ತಮ್ಮ ತಮ್ಮ ಪಾಲಿಗೆ ಬಂದ ಜಮೀನುಗಳನ್ನು ಬೇರೆ ಬೇರೆ ಸಾಗುವಳಿ ಮಾಡುತ್ತಿದ್ದರು ಅಂದರೆ ಸಾಕ್ಷಿಯು ಎಲ್ಲರೂ ಕೂಡಿ ಇದ್ದರು ಎನ್ನುತ್ತಾರೆ. ಮೂಲ ಪುರುಷ ಭೀಮಪ್ಪನ ಮಗ ಭೀಮಶೆಪ್ಪ ಮರಣ ಹೊಂದುವಾಗ

ನೀವು ಕೂಡಿ ಇದ್ದರೋ ಅಥವಾ ಬೇರೆ ಬೇರೆ ಇದ್ದಿರಾ ಅಂದರೆ ಸಾಕ್ಷಿಯು ನಾವು ಬೀಮಶೆಪ್ಪ ಮತ್ತು 1 ನೇ ಪ್ರತಿವಾದಿ ಕೂಡಿ ಇದ್ದೆವು ಎನ್ನುತ್ತಾರೆ. ಮೂಲ ಪುರುಷ ಭೀಮಪ್ಪ ಮರಣ ಹೊಂದಿದಾಗ ನನ್ನ ಗಂಡನ ಪಾಲಿಗೆ ಸರ್ವೆ ನಂ. 224 ರಲ್ಲಿ 1 ಎಕರೆ 25 ಗುಂಟೆ ಸರ್ವೆ ನಂ. 242 ರಲ್ಲಿ 1 ಎಕರೆ 20 ಗುಂಟೆ ಬಂದಿತ್ತು . ನಮ್ಮ ನಮ್ಮ ಪಾಲಿಗೆ ಬಂದ ಜಮೀನನ್ನು ನಾವು ಸಾಗುವಳಿ ಮಾಡುತ್ತಿದ್ದೆವು ಅಂದರೆ ಸರಿ. ಯಲ್ಲಪ್ಪನ ಪಾಲಿಗೆ ಬಂದ ಜಮೀನುಗಳನ್ನು ಯಲ್ಲಪ್ಪ ಸಾಗುವಳಿ ಮಾಡುತ್ತಿದ್ದ ಅಂದರೆ ಸರಿ. ಭೀಮಶೆಪ್ಪನ ಪಾಲಿಗೆ ಬಂದ ಜಮೀನುಗಳನ್ನು ಆತ ಸಾಗುವಳಿ ಮಾಡುತ್ತಿದ್ದ ಅಂದರೆ ಸರಿ. ಯಲ್ಲಪ್ಪ ತನ್ನ ಜಮೀನಿನ ಮೂಲದಿಂದ ಬಂದ ಆದಾಯದಿಂದ ಭೀಮಶೆಪ್ಪನ ಪಾಲಿಗೆ ಬಂದ ಜಮೀನನ್ನು ನೊಂದಾಯಿತ ಕ್ರಯ ಪತ್ರದ ಮೂಲಕ ಖರೀದಿ ಮಾಡಿರುತ್ತಾನೆ ಅಂದರೆ ಗೊತ್ತಿಲ್ಲ. ಯಲ್ಲಪ್ಪ ಭೀಮಶೆಪ್ಪನಿಂದ ಖರೀದಿ ಮಾಡಿದ ಜಮೀನಿನ ಖಾತೆ ಎಂ.ಇ ನಂ. 957 ಪ್ರಕಾರ ಆಗಿರುತ್ತದೆ ಅಂದರೆ ಸರಿಯಲ್ಲ. ಸರ್ವೆ ನಂ. 242 ರಲ್ಲಿ ನನ್ನ ಗಂಡ ಮತ್ತು 1 ನೇ ಪ್ರತಿವಾದಿ ತಮ್ಮ ಪಾಲಿನಲ್ಲಿ 1/3 ಭಾಗವನ್ನು ಪ್ರತಿವಾದಿ 3 ರವರಿಗೆ ಮಾರಾಟ ಮಾಡಿರುತ್ತಾರೆ ಅಂದರೆ ಸರಿಯಲ್ಲ. 3 ನೇ ಪ್ರತಿವಾದಿ ಸರ್ವೆ ನಂ. 242 ರಲ್ಲಿ ಎಷ್ಟು ಜಮೀನನ್ನು ಉಳುಮೆ ಮಾಡುತ್ತಾನೆ ಅಂದರೆ ಸಾಕ್ಷಿಯು 2 ಎಕರೆ 20 ಗುಂಟೆ ಎನ್ನುತ್ತಾರೆ . 3 ನೇ ಪ್ರತಿವಾದಿ ಸರ್ವೆ ನಂ. 242 ರಲ್ಲಿ 2 ಎಕರೆ 20 ಗುಂಟೆ ಜಮೀನನ್ನು ಯಾವ ರೀತಿಯಿಂದ ಸಾಗುವಳಿ ಮಾಡುತ್ತಾನೆ ಅಂದರೆ ಸಾಕ್ಷಿಯು ದಬ್ಬಾಳಿಕೆಯಿಂದ ಸಾಗುವಳಿ ಮಾಡುತ್ತಿದ್ದಾನೆ ಎನ್ನುತ್ತಾರೆ. ನನ್ನ ಗಂಡ ಮತ್ತು 1 ನೇ ಪ್ರತಿವಾದಿಗೆ ಸರ್ವೆ ನಂ. 242 ರಲ್ಲಿ ಯಾವುದೇ ಹಕ್ಕು ಇರದಿದ್ದರೂ ಸಹ 2 ಎಕರೆ 20 ಗುಂಟೆ ಜಮೀನನ್ನು 3 ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತಾರೆ ಅಂದರೆ ಸರಿಯಲ್ಲ.

<u>ಮುಂದುವರೆದ ಪಾಟೀ ಸವಾಲುಃ ಸಮಯ ನೀಡಲಾಯಿತು.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಪ್ರಕಾರ ಬೆರಳಚ್ಚು ಮಾಡಲಾಗಿದೆ)

ಓ ಹೇ ಕೇ ಸರಿ ಇದೆ

2 ನೇ ಹೆಚ್ಚುವರಿ ಹಿರಿಯ ದಿವಾಣಿ
ನ್ಯಾಯಾಧೀಶರು ಗೋಕಾಕ.

ಸಾಕ್ಷಿಯ ಸಹಿ